"ಆಹಾಹಾ, ಅದೆಲ್ಲಾ ಬುದ್ಧಿವಂತಿಕೆ ನನ್ನತ್ರ ತೋರಿಸ್ಬೇಡಿ. ಎಲ್ಲಿ ತಿಂದ್ಕಂಬಂದ್ರೂ ವಾಸನೆ ಬರ್ದೇ ಇರುತ್ತಾ?"

"ಮೆಜಾರಿಟಿಗೆ ಬರೋಕೆ ಮುಂಚೇನೇ ಕಲಿತ ವಿದ್ಯೆ ಕಣೇ. ಒಂದೇಸಲ ಪೂರ್ತಿ ಬಿಟ್ಬಿಡು ಅಂದ್ರೆ ತಲೆ ಕೆಟ್ಟಂಗಾಗುತ್ತೆ..."

"ಅದೆಲ್ಲಾ ನಂಗೊತ್ತಿಲ್ಲಪ್ಪಾ. ನಾನೋ, ನಿಮ್ಮ ಹೊಗೆಸೊಪ್ಪೋ ನೀವೇ ನಿರ್ಧಾರ ಮಾಡಿ."

ನಿರ್ಧಾರ ಮಾಡುವುದಕ್ಕೆ ಏನೂ ಉಳಿದುಕೊಂಡಿರಲಿಲ್ಲ. ಹೆಂಡತಿ ಹೇಳಿದಂತೆ ಕೇಳಿದ್ದ ಅನಂತ. ಮೊದಮೊದಲು ಕಷ್ಟ ಆಗಿದ್ದು ಹೌದು. 'ಇವಳ್ಯಾವಳು ನನ್ನ ಮೇಲೆ ದರ್ಬಾರು ಮಾಡೋಕೆ? ನನ್ನ ದುಡ್ಡು, ನನ್ನಿಷ್ಟ' ಎನಿಸಿದ್ದು ಹೌದು. 'ಏನೀಗ, ಎಷ್ಟು ದಿನ ಇವಳು ಹಟ ಸಾಧಿಸ್ತಾಳೋ ನೋಡೇಬಿಡೋಣ' ಎನ್ನುವಷ್ಟು ಬಾಯಿ ಚುಟುಗುಟ್ಟಿದ್ದೂ ಹೌದು. ಕ್ರಮೇಣ ಎಲ್ಲಾ ಅಭ್ಯಾಸವಾಗಿತ್ತು. 'ಹೋಗ್ಲಿ ಬಿಡು, ಇವಳ ದೆಸೆಂದಾದ್ರೂ ಒಂದು ದುರ್ವಿದ್ಯೆಗೆ ನಮಸ್ಕಾರ ಹೇಳಿದ ಹಾಗಾಯ್ತು' ಎಂದು ಸಮಾಧಾನ ಪಟ್ಟುಕೊಂಡಿದ್ದ ಅನಂತ. ಮಾತಿಗೆ ತಪ್ಪದ ಅವನ ನಿಷ್ಠೆ ನೋಡಿ ನಳಿನಿಗೆ ಆಶ್ಚರ್ಯ, ಸಂತೋಷ. 'ತನ್ನ ಮಾತು ಅಂದರೆ ನಯಾಪೈಸೆ ಬೆಲೆ ಕೊಡುವವರಿಲ್ಲ' ಅಂದುಕೊಂಡಿದ್ದವಳಿಗೆ ಈ ಪರಿಯ ಶರಣಾಗತ ಮನೋಭಾವ ಒಂದು ವಿಚಿತ್ರ ಅನುಭೂತಿಯನ್ನುಂಟುಮಾಡಿತ್ತು.

ಚಿಗುರು ಎಲೆಗೆ ತೆಳ್ಳಗೆ ಸುಣ್ಣ ಸವರಿ, ಅದರೊಳಗೆ ಅಡಿಕೆಪುಡಿ ಇಟ್ಟು ಮಡಿಸಿ, ಗಂಡನ ಕೈಗಿಡುವ ಸನ್ನಾಹದಲ್ಲಿದ್ದ ನಳಿನಿಗೆ ಕಳೆದ ವರ್ಷದ ನೆನವರಿಕೆಗಳು ನವಿರು ಭಾವನೆ ಮೂಡಿಸುತ್ತಾ, ಅವಳ ಕೈಲಿದ್ದ ವೀಳೆಯದ ಸುರುಳಿಯನ್ನು ನೇರವಾಗಿ ಬಾಯಿಗಿಡಿಸಿಕೊಂಡಿದ್ದ ಅನಂತ.

"ಇದಕ್ಕೇನು ಕಮ್ಮಿಯಿಲ್ಲ" ಎನ್ನುತ್ತಾ ತಲೆ ಕೊಂಕಿಸಿದ್ದಳು ನಳಿನಿ. ಯಾಕೋ ಮುಖ ಸಪ್ಪಗಾಗಿತ್ತು ಅನಂತನಿಗೆ.

"ಅಲ್ವೇ, ಇನ್ನೊಂದ್ಐದಾರು ತಿಂಗಳು ಒಬ್ಬನೇ ಇರಬೇಕಲ್ಲೇ? ನೆನೆಸ್ಕೊಳ್ಳೋಕೇ ಕಷ್ಟ ಆಗ್ತಿದೆ..."

"ಮದುವೆ ಆಗೋಕೆ ಮುಂಚೆ ಒಬ್ರೇ ಇರ್ಲಿಲ್ವಾ?"

"ಆ ಕಾಲ ಆಗ್ಹೋಯ್ತಲ್ಲ?"

"ಯಾಕಪ್ಪಾ, ಅಡಿಗೆ ಮಾಡ್ಕೋಬೇಕೂಂತ ಬೇಜಾರಾ?"

"ಸುಮ್ಸುಮ್ನೆ ತಮಾಷಿ ಮಾಡ್ಬೇಡ..." ಬಳಿಯಲ್ಲಿ ಕುಳಿತಿದ್ದ ಮಡದಿಯ ಕೈ ಹಿಡಿದು ತೊಡೆಯ ಮೇಲಿಟ್ಟುಕೊಂಡು ಸವರಿದ ಅನಂತ. ಕೈ ತುಂಬಿದ್ದ ಹಸಿರು ಗಾಜಿನ ಬಳೆಗಳು ಘಲ್ಲುಘಲ್ಲೆಂದು ಸದ್ದು ಮಾಡುತ್ತಾ ಅವನ ಮನಸ್ಸಿನ ಮಧುರಭಾವನೆಯನ್ನು ಮೀಟಿದುವು. 'ತನಗೆ ಈ ಜನ್ಮದಲ್ಲಿ ಮದುವೆಯಿಲ್ಲ' ಅಂದುಕೊಂಡಿದ್ದವನಿಗೆ ಕನಸಲ್ಲೂ ಕಲ್ಪಿಸದಿದ್ದಂತೆ ಮದುವೆಯ ಯೋಗ ಒದ್ದುಕೊಂಡು ಬಂದಿತ್ತು. ಆಗಲೇ ಅವನಿಗೆ ಮೂವತ್ತೆರಡು. ನೋಡಿ, ಕೇಳಿ ಸಂಬಂಧ ಕುದುರಿಸುವ ಹಿತೈಷಿಗಳು ಯಾರಿರಲಿಲ್ಲ. ಜೊತೆಗೆ ಹಳ್ಳಿಯಲ್ಲಿ ಬೇಸಾಯ ಮಾಡಿಕೊಂಡಿರುವಂತಾ ಯುವಕ. ತಾನೇ ಮೇಲೆ ಬಿದ್ದು ಹುಡುಗಿ ಹುಡುಕಿಕೊಂಡು ಹೋಗುವಷ್ಟು ದಾಷ್ಟೀಕತನ ಇಲ್ಲ. ಅವನ ಕಣ್ಣಮುಂದೆಯೇ ಬ್ರಹ್ಮಚಾರಿಗಳಾಗಿ ಉಳಿದಿದ್ದ ಪರಿಚಯದವರ ಲೆಕ್ಕ ಅವನನ್ನು ನಿರಾಶೆಯ ಅಂಚಿಗೆ ತಂದು ನಿಲ್ಲಿಸಿತ್ತು. 'ಬದುಕು ಇರುವುದೇ ಹೀಗೆ' ಎನ್ನುವ ನಿಲುವಿಗೆ ಅಂಟಿಕೊಂಡು ಇದ್ದಿದ್ದರಲ್ಲಿ ಸಮಾಧಾನ ಪಟ್ಟುಕೊಂಡು, ಕೈ ಬಾಯಿ ಸುಟ್ಟುಕೊಂಡು ಜೀವನ ನಡೆಸುತ್ತಿದ್ದವನಿಗೆ ಗೆಳೆಯನೊಬ್ಬನ ಮೂಲಕ ಈ ಸಂಬಂಧದ ಪ್ರಸ್ತಾಪ ಬಂದಿತ್ತು. ಆ ಗೆಳೆಯ ಕೂಡಾ 'ಈ ಮದುವೆ ಆಗಿಬಿಡುತ್ತದೆ' ಎನ್ನುವ ನಂಬಿಕೆಯಿಂದ ಹೇಳಿದವನಲ್ಲ. ಬದಲಿಗೆ ಈ ಮದುವೆ ಗೊತ್ತಾಗಿದ್ದು ಅವನಿಗೂ ಸಹಾ ಒಂದು ಚೋದ್ಯದಂತೆ ಕಂಡಿತ್ತು ಎಂಬುದು ಅನಂತನಿಗೆ ಗೊತ್ತಿದೆ. ಅವನಿಗೂ,